ಬೇಸಿಗೆ ಬಂತು, ಹೋಯಿತು. ನನಗೆ ಆ ಪುಸ್ತಕ ಒಬ್ಬ ರಾಕ್ಷಸನಂತಿದೆಯೆಂದು ಅರಿವಾಯಿತು. ಅದನ್ನು ನನ್ನವೇ ಕಣ್ಣುಗಳಿಂದ ನೋಡುತ್ತಿರುವ, ನನ್ನವೇ ಹತ್ತು ಬೆರಳುಗಳಿಂದ ಮುಟ್ಟುತ್ತಿರುವ ನಾನು ಅದಕ್ಕಿಂತ ಕಡಿಮೆ ರಾಕ್ಷಸನೇನೂ ಅಲ್ಲವೆಂಬ ವಿಚಾರದಿಂದ ಎಂಥ ಸಮಾಧಾನವಾದೀತು? ಆ ಪುಸ್ತಕವೊಂದು ದುಃಸ್ವಪ್ನದಂಥ ವಸ್ತುವೆಂದೂ, ಅದು ವಾಸ್ತವಿಕತೆಯನ್ನೇ ಮಲಿನಗೊಳಿಸಿದ ವಸ್ತುವೆಂದೂ ನನಗೆ ಅನ್ನಿಸಿತು.

ಬೆಂಕಿಯ ಬಗ್ಗೆ ಯೋಚಿಸಿದೆ. ಆ ಅಪರಿಮಿತ ಪುಸ್ತಕವನ್ನು ಬೆಂಕಿಗೊಡ್ಡಿ ಸುಟ್ಟುಹಾಕುವುದರಿಂದ ಅದೇ ಅಪರಿಮಿತವಾಗಿ ತನ್ನ ಹೊಗೆಯಿಂದ ಇಡೀ ಗ್ರಹವನ್ನೇ ಉಸಿರುಗಟ್ಟಿಸಬಹುದೆಂದು ಹೆದರಿದೆ. ಒಂದು ಎಲೆಯನ್ನು ಅಡಗಿಸಿಡುವ ಅತ್ಯುತ್ತಮ ಸ್ಥಳವೆಂದರೆ ಕಾಡು ಎಂದು ನಾನೆಲ್ಲೋ ಓದಿದ್ದು ನೆನಪಾಯಿತು. ನಾನು ನಿವೃತ್ತನಾಗುವುದಕ್ಕೆ ಮುಂಚೆ ಮೆಕ್ಸಿಕೊ ರಸ್ತೆಯಲ್ಲಿ, ಒಂಬತ್ತು ಲಕ್ಷ ಪುಸ್ತಕಗಳಿರುವ ಅರ್ಜೆಂಟೈನ್ ನ್ಯಾಷನಲ್ ಲೈಬ್ರರಿಯಲ್ಲಿ ಕೆಲಸಮಾಡುತ್ತಿದ್ದವನು. ಅದರ ಪ್ರವೇಶದ್ವಾರದ ಬಲಗಡೆಯಿರುವ ಒಂದು ಡೊಂಕಾದ ಸ್ಟೇರ್‌ಕೇಸು ಪುಸ್ತಕಗಳು, ನಕಾಶೆಗಳು, ಪತ್ರಿಕೆಗಳು ಮೊದಲಾದವನ್ನು ಇಟ್ಟಿರುವ ನೆಲಮಾಳಿಗೆಗೆ ಕರೆದೊಯ್ಯುವುದೆಂದು ನನಗೆ ಗೊತ್ತಿತ್ತು. ಒಂದು ದಿನ ನಾನಲ್ಲಿಗೆ ಹೋದವನು, ಲೈಬ್ರರಿಯಾತ ಬೇರೆಲ್ಲೋ ನೋಡುತ್ತಿದ್ದಾಗ ಇದೇ ಸುಸಮಯ ಎಂದುಕೊಂಡು ಲೈಬ್ರರಿಯ ತೇವಗೊಂಡ ಶೆಲ್ಫುಗಳಲ್ಲೊಂದರಲ್ಲಿ – ಅದು ಎಷ್ಟು ಎತ್ತರದಲ್ಲಿದೆ ಅಥವಾ ಬಾಗಿಲಿನಿಂದ ಎಷ್ಟು ದೂರದಲ್ಲಿದೆ ಎಂದು ಕೂಡ ಗಮನಿಸದೆ – ಆ ಮರಳಿನ ಹೊತ್ತಿಗೆಯನ್ನು ಅಡಗಿಸಿಟ್ಟೆ.

ಈಗ ಸ್ವಲ್ಪ ಆರಾಮಾಗಿದ್ದೇನೆ. ಆದರೂ ನನಗೆ ಆ ಲೈಬ್ರರಿಯಿರುವ ಬೀದಿಯಲ್ಲಿ ಕಾಲಿಡುವುದಕ್ಕೆ ಕೂಡ ಇಷ್ಟವಿಲ್ಲ.

### ಹೋರ್ಹೆ ಲೂಯಿಸ್ ಬೋರ್ಹೆಸ್ (1899 – 1986)

ಆರ್ಜೆಂಟೀನಾದ ಕವಿ, ಕತೆಗಾರ, ವಿಮರ್ಶಕ, ಬಹುಭಾಷಾ ವಿದ್ವಾಂಸ. ಸಣ್ಣಕತೆಯ ಪ್ರಕಾರದ ಸರಹದ್ದುಗಳನ್ನು ಹಿಗ್ಗಿಸಿದ ಈತನ ಕತೆಗಳಲ್ಲಿ ಕನಸುಗಳು, ಚಕ್ರವ್ಯೂಹಗಳು, ಕನ್ನಡಿಗಳು, ಅಪರಿಮಿತ ಲೈಬ್ರರಿಗಳು ರೂಪಕಗಳಾಗಿವೆ. 'ಅಲೆಫ್', 'ಲ್ಯಾಬ್ರಿಂತ್ಸ್', 'ಡಾಕ್ಟರ್ ಬ್ರೋಡಿಸ್ ರಿಪೋರ್ಟ್', 'ಬುಕ್ ಆಫ್ ಸ್ಯಾಂಡ್', 'ಕಲೆಕ್ಟೆಡ್ ಪೊಎಮ್ಸ್' ಇವನ ಮುಖ್ಯ ಕೃತಿಗಳು.

### ಎಸ್. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ಕನ್ನಡದ ವಿಶಿಷ್ಟ ಲೇಖಕ. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲ ಬಲ್ಲವರಿಲ್ಲ ಈ ಊರಿನಲ್ಲಿ', 'ಆಯ್ದ ಕತೆಗಳು' (ಕಥಾಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ', 'ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ', 'ವಿಧಾನಸಭೆಯಲ್ಲೊಂದು ಹಕ್ಕಿ' (ಕವನ ಸಂಕಲನಗಳು), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ', 'ಸರ್ವ ಜನಾಂಗದ ಶಾಂತಿಯ ಭಾಷೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿ ಸಣ್ಣಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು). ದಿವಾಕರ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.